ಸಾಕ್ಷಿಯನ್ನು ಕರೆಯಿಸಲಾಯಿತು ಪ್ರ.ವ. ಬೋದಿಸಲಾಯಿತು ದಿಃ 16-07-15

1 ಮತ್ತು 2ನೇ ಪ್ರತಿವಾದಿ ಪರ ವಕೀಲರಿಂದ ಪಾಟೀಸವಾಲುಃ ವಕೀಲರಿಂದ

ನಾನು ವಾದ ಪತ್ರ ಮತ್ತು ಪ್ರತಿವಾದ ಪತ್ರವನ್ನು ಓದಿಸಿ ತಿಳಿದುಕೊಂಡಿದೇನೆ. ನನ್ನ ತಂದೆ ಶಿವರಾಮನ್ ಮತ್ತು ಅವರ ಹೆಂಡತಿ ಪುಟ್ಟವೆಂಕಟಮ್ಮ ರವರಿಗೆ ನನ್ನ ತಂದೆ ದತ್ತು ಮಗನಾಗಿರುವುದರಿಂದ ಅದರ ಆಧಾರದ ಮೇಲೆ ನಾನು ಭಾಗ ಕೇಳುತ್ತಿದ್ದೇನೆ. ನನ್ನ ತಂದೆ ಹೆಸರು ಪುಟ್ಟಸ್ವಾಮಿ ರವರ ನೈಸರ್ಗಿಕ ತಂದೆಯವರ ಹೆಸರು ಹೆಚ್.ಪಿ. ಲಿಂಗೇಗೌಡ, ಸಾಕ್ಷಿ ಮುಂದುವರೆದು ಹೆಚ್.ಬಿ. ಶಿವರಾಮನ್ ರವರೇ ನನ್ನ ತಂದೆಯನ್ನು ಸಾಕಿರುತ್ತಾರೆಂದು ತಿಳಿಸುತ್ತಾರೆ. ಶಿವರಾಮನ್‌ರವರಿಗೆ ಮೂರು ಜನ ಅಣ್ಣಂದಿರು , ಐದು ಜನ ಅಕ್ಕತಂಗಿಯರು. ಶಿವರಾಮನ್ ರವರ ಅಣ್ಣಂದಿರ ಹೆಸರು ಸಿದ್ದಪ್ಪ , ದೇವೇಗೌಡ , ಲಿಂಗೇಗೌಡ ಎಂದರೆ ಸರಿ. ಇವರುಗಳಿಗೆ ಮಕ್ಕಳು ಇರುತ್ತಾರೆ ಎಂದರೆ ಸರಿ. ಶಿವರಾಮನ್ ಮತ್ತು ಅವರ ಅಣ್ಣತಮ್ಮಂದಿರು ಈ ಮೊದಲೇ ವಿಭಾಗವಾಗಿ ಬೇರೆ ಬೇರೆ ಇರುತ್ತಾರೆ ಎಂದರೆ ಸರಿ. ನಾಲ್ಕನೇ ಪ್ರತಿವಾದಿ ಸುಲೋಚನ ನನ್ನ ತಾಯಿ ಎಂದರೆ ಸರಿ.

ನನ್ನ ತಾಯಿಗೆ ದಿಃ 30-11-2006 ರಂದು ಎಲ್ಲೆಮಾಳದ ಸ.ನಂಃ 227/2 ಎರಡು ಎಕರೆ 95 ಸೆಂಟ್ಸ್ ಮತ್ತು ಸ.ನಂಃ 228/2 ರಲ್ಲಿ 3.6 ಸೆಂಟ್ಸ್ ಒಟ್ಟು 6 ಎಕರೆ ಸೆಂಟ್ಸ್ ಜಮೀನು ಶಿವರಾಮನ್‌ರವರು ನನ್ನ ತಾಯಿಗೆ ದಾನ ಪತ್ರವನ್ನು ಬರೆದು ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಆಸ್ತಿಯು ಭೂ ನ್ಯಾಯಾ ಮಂಡಳಿಯಿಂದ ಶಿವರಾಮನ್ ರವರ ಹೆಂಡತಿ ಪುಟ್ಟವೆಂಕಟಮ್ಮ ರವರಿಗೆ ಬಂದಂತಹ ಆಸ್ತಿ ಎಂದು ತಿಳಿಸಿರುತ್ತಾರೆ. ದಾವಾ ಸ್ವತ್ತು ಮತ್ತು ನನ್ನ ತಾಯಿಗೆ ದಾನ ಕೊಟ್ಟ ಸ್ವತ್ತುಗಳು ಶಿವರಾಮನ್ ಮತ್ತು ಅವರ ಹೆಂಡತಿ ಪುಟ್ಟವೆಂಕಟಮ್ಮರವರಿಗೆ ಬಾದ್ಯಪಟ್ಟ ಸ್ವತ್ತು ಎಂದರೆ ಸರಿಯಲ್ಲ.

ನನ್ನ ತಂದೆಯನ್ನು ಯಾವ ತಿಂಗಳು ಮತ್ತು ಯಾವ ವರ್ಷ ಮತ್ತು ಯಾವ ದಿನಾಂಕದಂದು ದತ್ತು ತೆಗೆದುಕೊಂಡರು ಎಂದು ಹೇಳಲು ಅಗುವುದಿಲ್ಲ. ನನಗೆ ನನ್ನ ತಾತ ಮತ್ತು ಅರ್ಜಿ ದತ್ತು ತೆಗೆದುಕೊಂಡಿರುವ ಬಗ್ಗೆ ಹೇಳಿದ್ದರಿಂದ ನನಗೆ ಗೊತ್ತಾಯಿತು. ಶಿವರಾಮನ್‌ರವರು ನನ್ನ ತಂದೆಯವರು ದತ್ತುಪಡಿದ ಬಗ್ಗೆ ದಾಖಲೆಯನ್ನು ಕೊಟ್ಟಿದ್ದೇನೆ. ಶಿವರಾಮನ್ ಮತ್ತು ಆತನ ಹೆಂಡತಿ ಪುಟ್ಟವೆಂಕಟಮ್ಮ ನನ್ನ ತಂದೆಯನ್ನು ದತ್ತು ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ.

1ನೇ ಪ್ರತಿವಾದಿ ನನ್ನ ತಂದೆಯ ತಂಗಿ ಎಂದರೆ ಸರಿ. ನಾನು ನನ್ನ ದಾವೆಯಲ್ಲಿ ಶಿವರಾಮನ್ ರವರು ನನ್ನ ತಂದೆ ಪುಟ್ಟಸ್ವಾಮಿ ರವರನ್ನು ಮತ್ತು 1ನೇ ಪ್ರತಿವಾದಿ ದೇವಮ್ಮ ರವರನ್ನು ದತ್ತು ತೆಗೆದುಕೊಂಡಿರುವುದರಿಂದ ಶಿವರಾಮನ್‌ರವರಿಗೆ ಬಾದ್ಯಪಟ್ಟ ಆಸ್ತಿಯಲ್ಲಿ ನನ್ನ ತಂದೆಗೆ ಬರಬೇಕಾದ ಅರ್ಧ ಹಿಸ್ಸೆಯಲ್ಲಿ ನನಗೆ ಅರ್ಧ ಹಿಸ್ಸೆ ಕೊಡಿಸಿ ಎಂದು ದಾವೆ ಹಾಕಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಂದೆಯ ತಂಗಿ ದೇವಮ್ಮಳನ್ನು ಶಿವರಾಮನ್‌ರವರು ದತ್ತು ತೆಗೆದುಕೊಂಡಿಲ್ಲ ಎಂದು ತಿಳಿಸಿರುತ್ತಾರೆ. ದೇವಮ್ಮಳನ್ನು ಶಿವರಾಮನ್‌ರವರು ದತ್ತು ತೆಗೆದುಕೊಂಡಿರುತ್ತಾರೆಂದು ಹೇಳಿದರೆ ಅದು ತಪ್ಪಾಗುತ್ತದೆ.

ನನ್ನ ತಂದೆ ಎಸ್‌ಎಸ್‌ಎಲ್‌ಸಿ ವರೆಗೆ ವ್ಯಾಸಾಂಗ ಮಾಡಿರುತ್ತಾರೆ. ನನ್ನ ತಾತ ವ್ಯಾಸಾಂಗ ಮಾಡಿದ ಶಾಲೆಯ ಸರ್ಟಿಫಿಕೇಟ್‌ಗಳನ್ನು ಎಲ್ಲಿ ಇಟ್ಟಿರುತ್ತಾರೆಂದು ನನಗೆ ಗೊತ್ತಿಲ್ಲ. ನಮ್ಮ ತಂದೆಯ ಶಾಲಾ ದಾಖಲಾತಿಗಳಲ್ಲಿ ತಂದೆಯ ಹೆಸರು ಮತ್ತು ಶಿವರಾಮನ್‌ಗೆ ಇರುವ ಸಂಬಂಧವನ್ನು ಏನು ಬರೆಯಲಾಗಿದೆ ಎಂದರೆ ಸಾಕ್ಷಿ ನಾನು ದಾಖಲೆಗಳನ್ನು ನೋಡಿಲ್ಲ ಎಂದು ತಿಳಿಸಿರುತ್ತಾರೆ.